ಕರ್ನಾಟಕ ಸರ್ಕಾರ

**ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ**

**ರೈತ ಭವನ, ಜನರಲ್ ಕಾರ್ಯಪ್ಪ ವೃತ್ತ, ಗದಗ– 582 101**

**E-mail: registrarksrdpru@gmail.com** **Office Phone: 08372-230338, Fax: 08372-297343**

ಕ್ರ ಸಂ: ಕ.ರಾ.ಗ್ರಾ.ಅ.ಪ.ರಾ.ವಿ:ಗದಗ/ಪ್ರ.ಪ/2017–18/ ದಿನಾಂಕ: 06–10–2017

# ಪತ್ರಿಕಾ ಪ್ರಕಟಣೆ

"ಇಂಗ್ಲೀಷ ಸಂಹವನ ಕೌಶಲ್ಯ ತರಬೇತಿ ಕಾರ್ಯಕ್ರಮ ಉದ್ಘಾಟನೆ"

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ವಿಶ್ವವಿದ್ಯಾಲಯವು 10 ದಿನಗಳ ಇಂಗ್ಲೀಷ ಸಂಹವನ ಕೌಶಲ್ಯ ತರಬೇತಿ ಕಾರ್ಯಕ್ರಮವನ್ನು ವಿಶ್ವವಿದ್ಯಾಲಯದ ಸಭಾಭವನದಲ್ಲಿ ದಕ್ಷಿಣ ಭಾರತ ಪ್ರಾಂತಿಯ ಆಂಗ್ಲಭಾಷಾ ಸಂಸ್ಥೆ, ಬೆಂಗಳೂರು (Reginal Institute of English South India, Bangalore, RIESI) ಇವರ ಸಹಯೋಗದೊಂದಿಗೆ ದಿನಾಂಕ 06–10–2017 ರಿಂದ 15–10–2017 ರವರೆಗೆ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದೆ. ಸದರಿ ಕಾರ್ಯಕ್ರಮದಲ್ಲಿ RIESI ಸಂಸ್ಥೆಯಿಂದ 6 ಮಂದಿ ತರಬೇತಿದಾರರು ಆಗಮಿಸಿದ್ದು, ಶನಿವಾರ ಮತ್ತು ರವಿವಾರವೂ ಕೂಡಿ 10 ದಿನಗಳ ಕಾಲ ತರಬೇತಿ ನೀಡಲಿದ್ದಾರೆ. ಸದರಿ ತರಬೇತಿಯಲ್ಲಿ 100ಕ್ಕಿಂತ ಹೆಚ್ಚು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಅದರ ಪ್ರಯೋಜನ ಪಡೆಯಲಿದ್ದಾರೆ.

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಡಾ. ಬಿ. ತಿಮ್ಮೇಗೌಡ ರವರು ಕಾರ್ಯಕ್ರಮ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡುತ್ತಾ, ಜಾಗತೀಕರಣ ಸಮಾಜದಲ್ಲಿ ಇಂಗ್ಲೀಷ್ ಭಾಷೆ ಅತ್ಯಂತ ಅವಶ್ಯಕವಾಗಿದ್ದು, ಈ ತರಬೇತಿಯ ಮೂಲಕ ವಿದ್ಯಾರ್ಥಿಗಳು ಇಂಗ್ಲೀಷ ಭಾಷೆಯನ್ನು ಕಲಿತು, ಜಾಗತಿಕ ಮಟ್ಟದಲ್ಲಿ ಸ್ಪರ್ದಿಸಲು ತಯಾರಾಗಿ ತಮ್ಮ ಜಿವನ ನಿರೂಪಿಸಿಕೊಂಡು, ದೇಶದ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಲು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಕುಲಸಚಿವರಾದ ಪ್ರೊ. ಡಾ. ಸುರೇಶ ವಿ. ನಾಡಗೌಡರ ಎಲ್ಲರನ್ನು ಸ್ವಾಗತಿಸಿ, ತರಬೇತಿಯ ಪ್ರಯೋಜನೆಯನ್ನು ಪಡೆಯಬೇಕೆಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಹಣಕಾಸು ಅಧಿಕಾರಿಗಳು ಮಾತನಾಡಿ ತರಬೇತಿಯಿಂದ ಆಗುವ ಅನುಕೂಲತೆಗಳನ್ನು ತಿಳಿಸಿದರು ಹಾಗೂ RIESI ನ ಕಾರ್ಯಕ್ರಮ ಸಂಯೋಜಕ ಡಾ. ಸಿ. ರವಿನಾರಾಯಣ ಕಾರ್ಯಾಗಾರದ ಪ್ರಯೋಜನವನ್ನು ವಿವವರಿಸಿದರು. ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಎಲ್ಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಪಾಲಗೊಂಡಿದ್ದರು.

ಕುಲಸಚಿವರು

**ಗೆ,**

ಸಂಪಾದಕರು, ಈ ಪತ್ರಿಕಾ ಪ್ರಕಟಣೆಯನ್ನು ನಿಮ್ಮ ಗೌರವಾನ್ವಿತ ದೈನಂದಿನ ಪತ್ರಿಕೆಯಲ್ಲಿ ಇದನ್ನು ಸುದ್ದಿಯಾಗಿ ಪ್ರಕಟಿಸಲು ವಿನಂತಿ.